ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಬುಧವಾರ, ೦೪, ಫೆಬ್ರವರಿ, ೨೦೨೬(ಮಾಘ, ೧೫, ಶಕವರ್ಷ, ೧೯೪೭)	ಸಂಚಿಕೆ ೨೩
Volume - 161	BENGALURU, WEDNESDAY, 04, FEBRUARY, 2026(MAGHA, 15, SHAKAVARSHA, 1947)	Issue 23

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

PROCEEDINGS OF THE GOVERNMENT OF KARNATAKA

Sub: Re-entrustment of Audit of Accounts of KIADB under section 19(3) of C & AG's DPC Act 1971-regarding.

Read: Letter No: KIADB/COF/AG Audit /15455/2025-26, dated: 12.12.2025.

****

PREAMBLE:

The Chief Executive Officer & Executive Member, Karnataka Industrial Areas Development Board, Bengaluru, in his letter dated: 12.12.2025 has stated that Government Order No: CI 109 IAP 2020, dated: 22.06.2020 issued earlier duly entrusting the audit of accounts of Karnataka Industrial Areas Development Board to The Comptroller and Auditor General of India as Statutory Auditor of KIADB for the period of 5 year from 2019-20 to 2024-25 under Section 19(3) of the Comptroller and Auditor General of India DPC Act, 1971 expires with the audit of accounts for the year 2024-25. It is also been requested in the said letter that State Government consider the appointment of Comptroller and Auditor General of India as Statutory Auditor of Karnataka Industrial Areas Development Board, for a further period of 5 years i.e., from 2024-25 to 2028-29.

Hence the following order,

GOVERNMENT ORDER NO. CI 707 IAP 2025,
BENGALURU, DATED: 05th JANUARY 2026.

The Government of Karnataka is pleased to appoint the Comptroller and Auditor General of India (C & AG) as Statutory Auditors for conducting audit of accounts of Karnataka Industrial Areas Development Board for a further period of 5 years i.e., from 2024-25 to 2028-29.

By Order and in the name of the
Governor of Karnataka,

(GANESHA M.S)
Under Secretary to Government (I/c),
Commerce and Industries Department (ID)

PR-25

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಚಿಕ್ಕಮಗಳೂರು ಜಿಲ್ಲೆಯ ಕಡೂರು ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು (01) ನೋಟರಿ ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ:

1. ಮಾನ್ಯ ಶಾಸಕರು, ಕಡೂರು ವಿಧಾನಸಭಾ ಕ್ಷೇತ್ರ, ಚಿಕ್ಕಮಗಳೂರು ಜಿಲ್ಲೆ ಇವರ ದಿನಾಂಕ : 16-12-2024ರ ಪತ್ರ.
2. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಮಗಳೂರು ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: 7155/2024, ದಿನಾಂಕ : 30-12-2024.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಪತ್ರದಲ್ಲಿ ಕಡೂರು ಕಂದಾಯ ತಾಲ್ಲೂಕು ಅಧಿಕ ಹಳ್ಳಿಗಳಿಂದ ಕೂಡಿ ವಿಸ್ತಾರವಾಗಿದ್ದು, ಅತ್ಯಧಿಕ ವ್ಯವಹಾರ ವಹಿವಾಟುಗಳು ನಡೆಯುತ್ತಿರುವುದರಿಂದ ಜನ ಸಾಮಾನ್ಯರಿಗೆ ಅನುಕೂಲವಾಗಲು ಒಂದು ನೋಟರಿ ಹುದ್ದೆಯ ಅವಶ್ಯಕತೆ ಇದ್ದರಿಂದ ವಿಶೇಷ ಪ್ರಕರಣದಡಿ ಒಂದು ನೋಟರಿ ಹುದ್ದೆಯನ್ನು ತುರ್ತಾಗಿ ಮಂಜೂರು ಮಾಡುವಂತೆ ಕೋರಿರುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯ ಕಡೂರು ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸವ ಬಗ್ಗೆ ಪರಿಶೀಲಿಸಲು, ಕೆಲವು ಮಾಹಿತಿಯನ್ನು ಹಾಗೂ ಅಭಿಪ್ರಾಯವನ್ನು ತಿಳಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಮಗಳೂರು ಜಿಲ್ಲೆ ಇವರನ್ನು ಕೋರಲಾಗಿರುತ್ತದೆ. ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ದಿನಾಂಕ : 30-12-2024ರ ಪತ್ರದಲ್ಲಿ ರಾಜ್ಯ ಸರ್ಕಾರದಿಂದ 06 ನೋಟರಿಗಳನ್ನು ನೇಮಿಸಲಾಗಿರುವುದರಿಂದ, ಹೆಚ್ಚುವರಿ ನೋಟರಿಗಳ ಹುದ್ದೆ ಸೃಜಿಸುವ ಅವಶ್ಯಕತೆಯಿರುವುದಿಲ್ಲವೆಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಮಗಳೂರು ಜಿಲ್ಲೆ ಇವರು ಅಭಿಪ್ರಾಯ ತಿಳಿಸಿರುತ್ತಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಮಗಳೂರು ಜಿಲ್ಲೆ ಇವರ ಅಭಿಪ್ರಾಯ ಹಾಗೂ ಮಾನ್ಯ ಶಾಸಕರು, ಕಡೂರು ವಿಧಾನಸಭಾ ಕ್ಷೇತ್ರ, ಚಿಕ್ಕಮಗಳೂರು ಜಿಲ್ಲೆ ಇವರ ಕೋರಿಕೆಯನ್ವಯ ಚಿಕ್ಕಮಗಳೂರು ಜಿಲ್ಲೆಯ ಕಡೂರು ಕಂದಾಯ ತಾಲ್ಲೂಕಿನಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗನುಗುಣವಾಗಿ ನೋಟರಿಗಳ ನಿಯಮಗಳು, 1956ರ ನಿಯಮ 8(4A) ರನ್ವಯ ಕಡೂರು ಕಂದಾಯ ತಾಲ್ಲೂಕಿಗೆ ಸಾರ್ವಜನಿಕ ಹಿತಾಸಕ್ತಿ ಹಾಗೂ ಆಡಳಿತ ಹಿತದೃಷ್ಟಿಯಿಂದ ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ - ಎಲ್‌ಸಿಎಲ್/185/2024, ಬೆಂಗಳೂರು, ದಿನಾಂಕ : 22-01-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಚಿಕ್ಕಮಗಳೂರು ಜಿಲ್ಲೆಯ ಕಡೂರು ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು (01) ನೋಟರಿ ಹುದ್ದೆಯನ್ನು ಸೃಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-26

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 447 ರನ್ವಯ ಸಾರ್ವಜನಿಕ ಕುಂದುಕೊರತೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು iPGRS 2.0ತಂತ್ರಾಂಶವನ್ನು ಅನುಷ್ಠಾನಗೊಳಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂ: ಸಿಆಸುಇ 7 ಪಿ ಆರ್ ಜೆ 2018, ದಿನಾಂಕ:28.09.2018
2. ಸರ್ಕಾರದ ಆದೇಶ ಸಂ:ಸಿಆಸುಇ 29 ಪಿ ಆರ್ ಜೆ 2020, ದಿನಾಂಕ:06.12.2020.
3. ಮುಖ್ಯಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ, ಬೆಂಗಳೂರು ಇವರ ಕಡತ ಸಂಖ್ಯೆ CEG-PGRSOADMN/1/2025.

ಪ್ರಸ್ತಾವನೆ:

ಕರ್ನಾಟಕ ರಾಜ್ಯ ಸರ್ಕಾರವು 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-447 ರಲ್ಲಿ ಸಾರ್ವಜನಿಕ ಕುಂದುಕೊರತೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಬಗ್ಗೆ ಈ ಕೆಳಕಂಡಂತೆ ಘೋಷಿಸಿದೆ.

> ***"ನಮ್ಮ ಸರ್ಕಾರವು ಆಯೋಜಿಸಿದ ರಾಜ್ಯಮಟ್ಟದ ಎರಡು ಜನಸ್ಪಂದನ ಕಾರ್ಯಕ್ರಮಗಳಲ್ಲಿ ಸ್ವೀಕರಿಸಿದ 2,43,676 ಅಹವಾಲುಗಳಲ್ಲಿ ಶೇ.97 ರಷ್ಟನ್ನು ಪರಿಹರಿಸಲಾಗಿದೆ. ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು AI ಚಾಲಿತ ತಂತ್ರಜ್ಞಾನಗಳಿಂದ ನವೀಕರಿಸಿ iPGRS – 2.0 ಮೂಲಕ ಕರ್ನಾಟಕವನ್ನು ನಾಗರೀಕ ಕೇಂದ್ರಿತ ಡಿಜಿಟಲ್ ಆಡಳಿತದಲ್ಲಿ ಮುಂಚೂಣಿಯಲ್ಲಿ ಇರಿಸಲಾಗುವುದು".***

ಮೇಲೆ ಓದಲಾದ ಕ್ರಮಾಂಕ (1) ಮತ್ತು (2) ರ ಆದೇಶಗಳನ್ವಯ ರಾಜ್ಯದ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಾರ್ವಜನಿಕರು ತಮ್ಮ ಕುಂದುಕೊರತೆ/ದೂರುಗಳನ್ನು ದಾಖಲಿಸಲು ಒಂದು ಸಮಗ್ರವಾದ ಹಾಗೂ ಸದೃಢವಾದ ಏಕೀಕೃತ ಸಾರ್ವಜನಿಕ ಕುಂದುಕೊರತೆ ವ್ಯವಸ್ಥೆಯನ್ನು ಕಲ್ಪಿಸುವ ಸಲುವಾಗಿ ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ:41189/2012ರ ದಿನಾಂಕ-19-03-2019ರ ತೀರ್ಪಿನನ್ವಯ ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರು ಸರ್ಕಾರಕ್ಕೆ ಈ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿ, 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 447ರ ಘೋಷಣೆಯಂತೆ ಕರ್ನಾಟಕ ರಾಜ್ಯವನ್ನು ನಾಗರಿಕ ಕೇಂದ್ರದಿತ ಡಿಜಿಟಲ್ ಆಡಳಿತದ ಮುಂಚೂಣಿಯಲ್ಲಿ ಇರಿಸುವ ಸಲುವಾಗಿ ಹಾಗೂ ಸಾರ್ವಜನಿಕ ಕುಂದುಕೊರತೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು AI ಚಾಲಿತ ತಂತ್ರಜ್ಞಾನವನ್ನೊಳಗೊಂಡ iPGRS-2.0 ತಂತ್ರಾಂಶವನ್ನು ಅನುಷ್ಠಾನಗೊಳಿಸಲು ಕೃತಕ ಬುದ್ಧಿಮತ್ತೆ ಚಾಲಿತ ತಂತ್ರಜ್ಞಾನಗಳಿಂದ ನವೀಕರಿಸಿದ iPGRS-2.0 ತಂತ್ರಾಂಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಇ-ಆಡಳಿತ) ಸಂಸ್ಥೆಯ ಅಧೀನ ಸಂಸ್ಥೆಗಳಾದ ಇ-ಆಡಳಿತ ಕೇಂದ್ರ ಮತ್ತು Centre for Smart Governance ನಿಂದ ಜಂಟಿಯಾಗಿ ಅಭಿವೃದ್ಧಿಪಡಿಸಲಾಗುವುದು. ಇದಕ್ಕೆ ಪೂರಕವಾಗಿ ಮಾರುಕಟ್ಟೆಯಲ್ಲಿ ಲಭ್ಯವಿರುವ ವಿವಿಧ ನೈಸರ್ಗಿಕ ಭಾಷಾ ಸಂಸ್ಕರಣಾ ಮಾಡ್ಯೂಲ್ ಗಳು, OCR, Translation, Transliteration, Speech-to-Text, Text-to-Speech, Voice and Text Chatbot ಮತ್ತು ಇತ್ಯಾದಿ ತಂತ್ರಜ್ಞಾನಗಳನ್ನು ಉಪಯೋಗಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಇಲಾಖೆಗಳ ಸೇವಾ ವಿತರಣಾ ಗುಣಮಟ್ಟ ಅಭಿವೃದ್ಧಿಗೆ ಅಗತ್ಯವಾಗಿರುತ್ತದೆ. ಇದಕ್ಕಾಗಿ

ಕೇಂದ್ರ ಸರ್ಕಾರ /ವಿವಿಧ ರಾಜ್ಯ ಸರ್ಕಾರ, ಖಾಸಗಿ ಏಜೆನ್ಸಿ ಮತ್ತು ಸಂಸ್ಥೆಗಳ ಸೇವೆಯನ್ನು ಸಹ ಪಡೆಯುವುದು ಅತ್ಯಗತ್ಯವಾಗಿರುತ್ತದೆ ಎಂದು ತಿಳಿಸಿ , ಅದರಂತೆ, ಅನುದಾನವನ್ನು ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ434 ವೆಚ್ಚ-12/2025 ರಲ್ಲಿ "iPGRS–2.0 ಅಭಿವೃದ್ಧಿ ಯೋಜನೆಯನ್ನು ತಾಂತ್ರಿಕ ಸಮಿತಿಯು ಪರಿಶೀಲಿಸಲಿದ್ದು, ಅಭಿವೃದ್ಧಿ ವೆಚ್ಚ, ಮಾನ ಸಂಪನ್ಮೂಲ ವೆಚ್ಚ ಮತ್ತು ಹೆಚ್ಚುವರಿ ವೆಚ್ಚವನ್ನು ಒಳಗೊಂಡಿರುತ್ತದೆ. ಆದುದರಿಂದ ಸದರಿ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ತಾತ್ವಿಕ ಅನುಮೋದನೆ ನೀಡಿ KTTP ಕಾಯ್ದೆಯ ಪ್ರಕಾರ ಕ್ರಮ ಕೈಗೊಳ್ಳಲು, ಮುಂದುವರೆದು 2025-26ನೇ ಸಾಲಿಗೆ ಅವಶ್ಯವಿರುವ ರೂ.98,03,669/-ಗಳನ್ನು ಲೆಕ್ಕ ಶೀರ್ಷಿಕೆ:"3451-00-090-2-04-059:Other expenses" ರಡಿ ಲಭ್ಯವಿರುವ ಅನುದಾನದಿಂದ ಭರಿಸುವಂತೆ ತಿಳಿಸಿದೆ". ಅದರಂತೆ, ಅಗತ್ಯ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಲಾಗಿದೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 447ನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ರೂ.98,03,669/-ಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ:"3451-00-090-2-04-059:Other expenses" ರಡಿ ಲಭ್ಯವಿರುವ ಅನುದಾನದಿಂದ ಭರಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 21 ಪಿಜಿಎ 2025,
ಬೆಂಗಳೂರು, ದಿನಾಂಕ:06.12.2025.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 447ರ ಘೋಷಣೆಯಂತೆ ಕರ್ನಾಟಕ ರಾಜ್ಯವನ್ನು ನಾಗರಿಕ ಕೇಂದ್ರದಿತ ಡಿಜಿಟಲ್ ಆಡಳಿತದ ಮುಂಚೂಣಿಯಲ್ಲಿ ಇರಿಸುವ ಸಲುವಾಗಿ ಹಾಗೂ ಸಾರ್ವಜನಿಕ ಕುಂದುಕೊರತೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು AI ಚಾಲಿತ ತಂತ್ರಜ್ಞಾನವನ್ನೊಳಗೊಂಡ ಕೃತಕ ಬುದ್ಧಿಮತ್ತೆ ಚಾಲಿತ ತಂತ್ರಜ್ಞಾನಗಳಿಂದ ನವೀಕರಿಸಿದ iPGRS-2.0 ತಂತ್ರಾಂಶವನ್ನು ಅನುಷ್ಠಾನಗೊಳಿಸಲು 2025-26ನೇ ಸಾಲಿಗೆ ಅಗತ್ಯವಿರುವ ರೂ.98,03,669/-ಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ:"3451-00-090-2-04-059: Other expenses" ರಡಿಇ-ಆಡಳಿತ ಕೇಂದ್ರಕ್ಕೆ ಒದಗಿಸಿರುವ ರೂ.4000.00 ಲಕ್ಷಗಳ ಅನುದಾನದಿಂದ ಭರಿಸಲು ಆದೇಶಿಸಿದೆ.

ಈ ಯೋಜನೆಯ ಮೊದಲ ಹಂತವನ್ನು ಪ್ರಸ್ತಾಪಿತ ರೂ. ರೂ.98,03,669/-ಗಳ ಅನುದಾನದ ಮಿತಿಯನ್ನು ಮೀರದಂತೆ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 434 ವೆಚ್ಚ-12/2025 ದಿನಾಂಕ:25.11.2025 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:PDS 45 PER 2025 ದಿನಾಂಕ:06.05.2025 ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಿ. ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ (ಇ-ಆಡಳಿತ / ದೂರುಗಳು
ಮತ್ತು ಕುಂದುಕೊರತೆಗಳು)

PR-27

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ತಾಲ್ಲೂಕು, ಅಜ್ಜಂಪುರ ಹೋಬಳಿ, ಗೌರಪುರ ಗ್ರಾಮದಲ್ಲಿ ಒಟ್ಟು 03-33-00 ಎಕರೆ ಹೆಚ್ಚುವರಿ ಜಮೀನನ್ನು ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆ ಪ್ಯಾಕೇಜ್-03ರ ಕಾಮಗಾರಿಗಾಗಿ ಜಮೀನನ್ನು ಭೂಸ್ವಾಧೀನಪಡಿಸುವ ಸಂಬಂಧ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013ರ ಕಲಂ-19(1) ಮತ್ತು 19(2) ರಡಿ ಅಂತಿಮ ಅಧಿಸೂಚನೆ ಹೊರಡಿಸುವ ಬಗ್ಗೆ.

ಓದಲಾಗಿದೆ:-

1. ಪ್ರಾಥಮಿಕ ಅಧಿಸೂಚನೆ ಕ್ರಮಾಂಕ: ಸಂಖ್ಯೆ:ಎಂ 5 ಎಲ್ ಎ ಕ್ಯೂ ಸಿಆರ್: 49/2021-2022,ದಿನಾಂಕ:03.08.2024.
2. ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ 06 ಎಕ್ಯೂಎಲ್ 2025 , ದಿನಾಂಕ: 25-03-2025.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 06 ಎಕ್ಯೂಎಲ್ 2025 , ದಿನಾಂಕ:28-08-2025.
4. ಜಿಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಇವರಿಂದ ಇ-ಆಫೀಸ್ ಮೂಲಕ ಸ್ವೀಕೃತವಾಗಿರುವ ಕಡತ ಸಂಖ್ಯೆ:DCCKM-REV0ACQ(LAQ)/28/2025.

******

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮಸಂಖ್ಯೆ:(1)ರ ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ:04-09-2024ರಂದು ಪ್ರಸ್ತಾಪಿತ ಯೋಜನೆಗೆ ಭೂಸ್ವಾಧೀನ ಕಾಯ್ದೆ ಕಲಂ-11(1)ರ ಪ್ರಾಥಮಿಕ ಅಧಿಸೂಚನೆಯು ಪ್ರಕಟವಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ:(2)ರಲ್ಲಿ ಭೂಸ್ವಾಧೀನ ಕಾಯ್ದೆ ಕಲಂ-15(2)(3)ರಡಿ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರೆಸಲು ಸರ್ಕಾರದಿಂದ ನಿರ್ದೇಶನ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ:(3)ರಲ್ಲಿ ಭೂಸ್ವಾಧೀನ ಕಾಯ್ದೆ ಕಲಂ-19(7)ರಡಿ ದಿನಾಂಕ:03.09.2025 ರಿಂದ 04.02.2026ರವರೆಗೆ ಕಾಲಾವಕಾಶವನ್ನು ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ:(4)ರ ಕಡತದಲ್ಲಿ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ ಇವರಿಂದ ಸ್ವೀಕೃತವಾದ ಪ್ರಸ್ತಾವನೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ತಾಲ್ಲೂಕು, ಅಜ್ಜಂಪುರ ಹೋಬಳಿ, ಗೌರಪುರ ಗ್ರಾಮದಲ್ಲಿ ಒಟ್ಟು 03-33-00 ಎಕರೆ ಹೆಚ್ಚುವರಿ ಜಮೀನನ್ನು ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆ ಪ್ಯಾಕೇಜ್-03ರ ಕಾಮಗಾರಿಗಾಗಿ ಜಮೀನನ್ನು ಭೂಸ್ವಾಧೀನಪಡಿಸಲು ಕಲಂ-19(1)ರ ಅಧಿಸೂಚನೆಗೆ ಅನುಮೋದನೆ ನೀಡುವಂತೆ ಕೋರಿಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013ರ ಕಲಂ-19ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭೂಕೋರಿಕಾ ಸಂಸ್ಥೆಯ ಹಾಗೂ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆರವರ ಕೋರಿಕೆಯ ಮೇರೆಗೆ ಈ ಕೆಳಕಂಡಂತೆ ಆದೇಶಿಸಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 06 ಎಕ್ಯೂವೈ 2025,
ಬೆಂಗಳೂರು ದಿನಾಂಕ:12-01-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಪ್ರಸ್ತಾವನೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ತಾಲ್ಲೂಕು, ಅಜ್ಜಂಪುರ ಹೋಬಳಿ, ಗೌರಪುರ ಗ್ರಾಮದಲ್ಲಿ ಒಟ್ಟು 03-33-00 ಎಕರೆ ಹೆಚ್ಚುವರಿ ಜಮೀನನ್ನು ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆ ಪ್ಯಾಕೇಜ್-03ರ ಕಾಮಗಾರಿಗಾಗಿ ಜಮೀನನ್ನು ಭೂಸ್ವಾಧೀನ ಕಾಯ್ದೆ-2013ರ ಕಲಂ-19(1) ಮತ್ತು 19(2) ರಡಿಯಲ್ಲಿನ ಅವಕಾಶದನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಆದೇಶಿಸಿದೆ.

ಪ್ರಸ್ತಾವನೆಯಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿಗೆ ಸಂಬಂಧಿಸಿದಂತೆ ವಿಸ್ತೀರ್ಣದಲ್ಲಾಗಲೀ, ಜೆ.ಎಂ.ಸಿಯಲ್ಲಾಗಲೀ ಅಥವಾ ಮರ-ಮಾಲ್ಕಿ ಹಾಗೂ ಭೂಮಿಯಲ್ಲಿ ಒಳಗೊಂಡಿರುವ ಇತರೆ ಸ್ವತ್ತುಗಳ ಲೆಕ್ಕಾಚಾರದಲ್ಲಿ ತಪ್ಪುಗಳು ಕಂಡು ಬಂದಲ್ಲಿ ಹಾಗೂ ಭವಿಷ್ಯದಲ್ಲಿ ಉದ್ಭವಿಸುವ ಕಾನೂನಾತ್ಮಕ ಹಾಗೂ ಇತರೆ ಯಾವುದೇ ಲೋಪಗಳಿಗೆ ಸಂಬಂಧಿಸಿದ ಅಧಿಕಾರಿ/ನೌಕರರನ್ನು ಜವಾಬ್ದಾರರನ್ನಾಗಿಸತಕ್ಕದ್ದು.

ಉಪ ವಿಭಾಗಾಧಿಕಾರಿಗಳು, ತರೀಕೆರೆ ಉಪವಿಭಾಗ, ತರೀಕೆರೆ ಇವರನ್ನು ಭೂಸ್ವಾಧೀನ ಅಧಿನಿಯಮ 3ನೇ ಪ್ರಕರಣ (ಜಿ) ಖಂಡದ ಮೇರೆಗೆ ಜಿಲ್ಲಾಧಿಕಾರಿಗಳ ಕಾರ್ಯವನ್ನು ನಿರ್ವಹಿಸಲು ನಿಯುಕ್ತಿಗೊಳಿಸಲಾಗಿದೆ. ಹಾಗೂ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಡುವ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲು ಆದೇಶಿಸುವ ಅಧಿಕಾರವನ್ನು ನೀಡಲಾಗಿದೆ. ಕರಡು ಐತೀರ್ಪು ರಚಿಸುವ ಮುನ್ನ ಭೂಸ್ವಾಧೀನ ವೆಚ್ಚದ ಪೂರ್ಣ ಮೊತ್ತವನ್ನು ಸಂಬಂಧಿಸಿದ ಭೂಕೋರಿಕಾ ಇಲಾಖೆಯಿಂದ ಭರಣ ಮಾಡಿಕೊಳ್ಳತಕ್ಕದ್ದು, ಹಾಗೂ ಈ ಹಿಂದೆ ಇದೇ ಜಮೀನುಗಳು ಭೂಸ್ವಾಧೀನವಾಗಿಲ್ಲವೆಂದು ಭೂಸ್ವಾಧೀನಾಧಿಕಾರಿಗಳು ಖಚಿತಪಡಿಸಿಕೊಂಡು ದೃಢೀಕರಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರೇಣುಕ.ಬಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಸ್ವಾಧೀನ 1&3)

PR-28

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH